**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಹದಿಮೂರನೇ ಅಧಿವೇಶನ**
**(ಮುಂದುವರೆದ ಉಪವೇಶನ)**

# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-9)**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ, 2009ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ, 2009ನ್ನು (2010ರ ಕರ್ನಾಟಕ ಅಧಿನಿಯಮ ಸಂಖ್ಯೆ 13) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**-(1) ಈ ಅಧಿನಿಯಮವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೆ ಜಾರಿಗೆ ಬರತಕ್ಕದ್ದು .

**2. 12ನೇ ಪ್ರಕರಣದ ತಿದ್ದುಪಡಿ.**- ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ, 2009ರ (2010ರ ಕರ್ನಾಟಕ ಅಧಿನಿಯಮ ಸಂಖ್ಯೆ 13) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 12ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ,-

(i) ಮೊದಲನೇ ಪರಂತುಕದ (ಎ) ಖಂಡದಲ್ಲಿ "ಅರವತ್ತೈದು ವರ್ಷ" ಎಂಬ ಪದಗಳಿಗೆ "ಅರವತ್ತೇಳು ವರ್ಷ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) ಎರಡನೇ ಪರಂತುಕದಲ್ಲಿ "ಅರವತ್ತೈದು ವರ್ಷಗಳು" ಎಂಬ ಪದಗಳಿಗೆ "ಅರವತ್ತೇಳು ವರ್ಷಗಳನ್ನು " ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 57ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 57ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ "ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು" ಎಂಬ ಪದಗಳಿಗೆ "ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆ ಇವರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ, 2009ನ್ನು (2010ರ ಕರ್ನಾಟಕ ಅಧಿನಿಯಮ ಸಂಖ್ಯೆ:13) ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ :-

(i) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ದಲ್ಲಿ ಇರುವಂತೆ ಕುಲಪತಿಗಳ ವಯೋಮಿತಿಯನ್ನು ಅನುಸರಿಸುವುದಕ್ಕಾಗಿ ಕುಲಪತಿಯ ಹುದ್ದೆಯನ್ನು ಹೊಂದಲು ಗರಿಷ್ಠ ವಯೋಮಿತಿಯನ್ನು ಅರವತ್ತೇಳು ವರ್ಷಗಳಿಗೆ ಹೆಚ್ಚಿಸುವುದು; ಮತ್ತು

(ii) ರಾಜ್ಯ ಲೆಕ್ಕ ಪತ್ರಗಳ ಇಲಾಖೆಯ ನಿಯಂತ್ರಕರ ಪದನಾಮವನ್ನು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆ ಎಂದು ಬದಲಾಯಿಸುವುದು.

ಆದ್ದರಿಂದ ಈ ವಿಧೇಯಕ.

ತಾತ್ಕಾಲಿಕವಾಗಿ ಅಂಗೀಕರಿಸಲಾಗಿದೆ

**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಹದಿಮೂರನೇ ಅಧಿವೇಶನ**
**(ಮುಂದುವರೆದ ಉಪವೇಶನ)**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017ಕ್ಕೆ (2017ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 9).

ಶ್ರೀ ಬಸವರಾಜ ರಾಯರೆಡ್ಡಿ, ಉನ್ನತ ಶಿಕ್ಷಣ ಮಂತ್ರಿಗಳು ಇವರಿಂದ,

ನಾನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017 (2017ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 9) ರಲ್ಲಿ ಈ ಕೆಳಕಂಡ ತಿದ್ದುಪಡಿಯನ್ನು ತರಲು ಉದ್ದೇಶಿಸಿ ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇನೆ,–

**ಖಂಡ 2**

ಸದರಿ ವಿಧೇಯಕದ ಖಂಡ 2ಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ;–

" **2. 12ನೇ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ, 2009ರ (2010ರ ಕರ್ನಾಟಕ ಅಧಿನಿಯಮ ಸಂಖ್ಯೆ 13) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 12ನೇ ಪ್ರಕರಣದ (3)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(3) ಕುಲಪತಿಯವರು ನಾಲ್ಕು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮರು ನೇಮಕಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ:

ಪರಂತು,–

ಎ) ಅರವತ್ತೇಳು ವರ್ಷ ವಯಸ್ಸಾದ ಯಾವೊಬ್ಬ ವ್ಯಕ್ತಿಯು ಕುಲಪತಿಯಾಗಿ ನೇಮಕವಾಗತಕ್ಕದ್ದಲ್ಲ ಅಥವಾ ಪದಧಾರಣ ಮಾಡತಕ್ಕದ್ದಲ್ಲ.

ಬಿ) ಕುಲಪತಿಯವರು, ಕುಲಾಧಿಪತಿಯವರಿಗೆ, ಸ್ವತ: ಸಹಿ ಮಾಡಿದ ಪತ್ರ ಬರೆದು ಮತ್ತು ಎರಡು ತಿಂಗಳ ನೋಟೀಸನ್ನು ನೀಡಿದ ತರುವಾಯ ತಮ್ಮ ಪದಕ್ಕೆ ರಾಜೀನಾಮೆ ನೀಡಬಹುದು.

ಮತ್ತು ಪರಂತು, ಕುಲಪತಿಯಾಗಿ ನೇಮಕಗೊಂಡ ವ್ಯಕ್ತಿಯು, ತನ್ನ ಸೇವಾವಧಿಯಲ್ಲಿ ಅರವತ್ತೇಳು ವರ್ಷಗಳು ಪೂರ್ಣಗೊಳಿಸಿದರೆ ಪದದಿಂದ ನಿವೃತ್ತರಾಗತಕ್ಕದ್ದು."

ಎಸ್.ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಬಸವರಾಜ ರಾಯರೆಡ್ಡಿ**
ಉನ್ನತ ಶಿಕ್ಷಣ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

**ಅನುಬಂಧ**

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ, 2009ರ**

**(2010ರ ಕರ್ನಾಟಕ ಅಧಿನಿಯಮ ಸಂಖ್ಯೆ:13) ಉದ್ಧೃತ ಭಾಗ**

Xxx xxx xxx

**12. ಕುಲಪತಿಯವರು.**- Xxx xxx xxx

(3) ಕುಲಪತಿಯವರು ನಾಲ್ಕು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮರು ನೇಮಕಗೊಳ್ಳಲು ಅರ್ಹರಾಗಿರತಕ್ಕದ್ದು:

ಪರಂತು,-

ಎ) ಅರವತ್ತೈದು ವರ್ಷ ವಯಸ್ಸಾದ ಯಾವೊಬ್ಬ ವ್ಯಕ್ತಿಯು ಕುಲಪತಿಯಾಗಿ ನೇಮಕವಾಗತಕ್ಕದ್ದಲ್ಲ ಅಥವಾ ಪದಧಾರಣ ಮಾಡತಕ್ಕದ್ದಲ್ಲ.

(ಬಿ) ಕುಲಪತಿಯವರು, ಕುಲಾಧಿಪತಿಯವರಿಗೆ, ಸ್ವತ: ಸಹಿ ಮಾಡಿದ ಪತ್ರ ಬರೆದು ಮತ್ತು ಎರಡು ತಿಂಗಳ ನೋಟೀಸನ್ನು ನೀಡಿದ ತರುವಾಯ ತಮ್ಮ ಪದಕ್ಕೆ ರಾಜೀನಾಮೆ ನೀಡಬಹುದು.

ಮತ್ತೂ ಪರಂತು, ಕುಲಪತಿಯಾಗಿ ನೇಮಕಗೊಂಡ ವ್ಯಕ್ತಿಯು, ತನ್ನ ಸೇವಾವಧಿಯಲ್ಲಿ ಅರವತ್ತೈದು ವರ್ಷಗಳು ಪೂರ್ಣಗೊಳಿಸಿದರೆ ಪದದಿಂದ ನಿವೃತ್ತರಾಗತಕ್ಕದ್ದು.

Xxx xxx xxx

**57. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.**- Xxx xxx xxx

(3) ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು ವರ್ಷಕ್ಕೊಮ್ಮೆ ಏಪ್ರಿಲ್ ತಿಂಗಳಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು.

Xxx xxx xxx

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ . 1130-ಪ್ರತಿಗಳು 1000, 16ನೇ ಮಾರ್ಚ್, 2017

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**THIRTEENTH SESSION**
**(Adjourned Meetings)**

# THE KARNATAKA SAMSKRITA VISHWAVIDYALAYA (AMENDMENT) BILL, 2017

**(L.A. Bill No. 9 of 2017)**

A Bill to amend the Karnataka Samskrita Vishwavidyalaya Act, 2009.

Whereas it is expedient to amend the Karnataka Samskrita Vishwavidyalaya Act, 2009 (Karnataka Act No. 13 of 2010) for the purposes hereinafter appearing;

Be it enacted by the Karnataka State Legislature in the sixty-eighth year of the Republic of India, as follows:-

**1. Short title and commencement.**- (1) This Act may be called the Karnataka Samskrita Vishwavidyalaya (Amendment) Act, 2017.

(2) It shall come into force at once.

**2. Amendment of section 12.** - In the Karnataka Samskrita Vishwavidyalaya Act, 2009 (Karnataka Act No. 13 of 2010) (hereinafter referred to as the principal Act), in section 12, in sub-section (3),-

(i) in the first proviso, in clause (a), for the words "sixty five years", the words "sixty seven years" shall be substituted; and

(ii) in the second proviso, for the words "sixty five years", the words "sixty seven years" shall be substituted.

**3. Amendment of section 57.**- In section 57 of the Principal Act, in sub section (3), for the words, "Controller of State Accounts", the words "Principal Director, Karnataka State Audit and Accounts Department" shall be substituted.

**STATEMENT OF OBJECTS AND REASONS**

It is considered necessary to amend the Karnataka Samskrita Vishwavidyalaya Act, 2009 (Karnataka Act No. 13 of 2010),-

(i) to enhance the upper age limit to hold office of the Vice Chancellor to sixty seven years which is in conformity with the age limit of the Vice Chancellors in the Karnataka State Universities Act, 2000; and

(ii) change the nomenclature of the Controller of State Accounts Department as the Principal Director, Karnataka State Audit and Accounts Department.

Hence, the Bill.

**(Provisionally admitted)**

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**

**THIRTEENTH SESSION**

**(ADJOURNED MEETINGS)**

Amendment to the Karnataka Samskrita Vishwavidyalaya (Amendment) Bill, 2017 (L.A.Bill No. 9 of 2017)

By Shri Basavaraj Rayareddi, Minister for Higher Education

I hereby give notice of my intention to move the following amendment to the Karnataka Samskrita Vishwavidyalaya (Amendment) Bill, 2017 (L.A.Bill No. 9 of 2017) namely:-

**Clause-2**

In the said Bill, for clause 2, the following shall be substituted, namely:-

"**2. Amendment of section 12.-** In the Karnataksa Samskrita Vishwavidyalaya Act, 2009 (Karnataka Act No. 13 of 2010) (hereinafter referred to as the principal Act), in section 12, for sub-section (3), the following shall be substituted, namely:-

(3) The Vice-Chancellor shall hold office for a period of four years and shall not be eligible for re-appointment:

Provided that;

(a) No person shall be appointed or hold office of the Vice-Chancellor if he has attained the age of sixty seven years.

(b) The Vice-Chancellor may, by writing under his hand addressed to the Chancellor and after giving two months notice resign to his office;

Provided further that a person appointed as Vice-Chancellor shall retire from office, if, during the term of his office he completes the age of sixty seven years."

**S. MURTHY**
**Secretary (I/C)**

## FINANCIAL MEMORANDUM

There is no extra expenditure involved in the proposed legislative measure.

**BASAVARAJ RAYAREDDI**
Minister for Higher Education

**S. Murthy**
Secretary (I/C)
Karnataka Legislative Assembly

## ANNEXURE

## EXTRACT FROM THE KARNATAKA SAMSKRITA VISHWAVIDYALAYA ACT 2009 (KARNATAKA ACT 13 OF 2010)

**XX** **XX** **XX**

**12. The Vice-Chancellor.- XX** **XX** **XX**

(3) The Vice-Chancellor shall hold office for a period of four years and shall not be eligible for re-appointment: Provided that; (a) No person shall be appointed or hold office of the Vice-Chancellor if he has attained the age of Sixty-five years. (b) The Vice-Chancellor may, by writing under his hand addressed to the Chancellor and after giving two months notice resign to his office; Provided further that a person appointed as Vice-Chancellor shall retire from office, if, during the term of his office he completes the age of sixty five years.

**XX** **XX** **XX**

**57. Annual Accounts and Audit.- XX** **XX** **XX**

(3) The accounts of the University shall be audited by the Controller of State Accounts once in a year, in the month of April.

**XX** **XX** **XX**

Government Press, Vikasa Soudha Unit, Bengaluru 16th March, 2017 P7, W.D.1130, Copies 1000